ರೈತರ ಕಷ್ಟವನ್ನು ಅರಿತಿರತಕ್ಕವರು. ತೆಂಗಿನ ಬೇಸಾಯ ಮಾಡುವವರಾಗಿದ್ದಿರಿ. ಈಗ ಸುಮಾರು ೧೦ ವರ್ಷಗಳಿಂದ ನಮ್ಮ ತುಮಕೂರು ಜಿಲ್ಲೆಯಂ ಯಾವ ಕೆರೆಗಳೂ ತುಂಬಿಲ್ಲ. ತುಮಕೂರು ಜಿಲ್ಲೆಯಲ್ಲಿ ಈ ಎರಡು ಕೆರೆಗಳು ಮಾತ್ರ ದೊಡ್ಡವು, ತುಮಕೂರು ಜಿಲ್ಲೆಗೆ ಹೇಮಾವತಿ ನೀರು ಬಂದಾಗ ಈ ಕೆರೆಗಳಿಗೆ ನೀರು ಕೊಡುವುದಕ್ಕೆ ಸಾಧ್ಯವೇ ಹೊರತು ಈಗ ಆಗುವುದಿಲ್ಲ. ಇದನ್ನು ನೀವು ಇಲ್ಲ ಎಂದರೆ ಕಷ್ಟವಾಗುತ್ತದೆ. ತಾವು ಪರಿಶೀಲನೆ ಮಾಡುತ್ತೇವೆ ಎನ್ನುತಕ್ಕ ಮಾತನ್ನು ಹೇಳಿದರೆ ಬಹಳ ಒಳ್ಳೆಯದು. ಇದನ್ನು ಮಾಡುವುದರಿಂದ ಫೈನಾನ್ಸ್ ಬರ್ಡನ್ ಏನೂ ಬರುವುದಿಲ್ಲ. ರೈತರ ಹಿತದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ತಾವು ಒಪ್ಪಿಕೊಳ್ಳಬೇಕಂ. ಪರಿಶೀಲನೆ ಮಾಡುತ್ತೇವೆ ಎಂಬ ಒಂದು ಮಾತನಾದರೂ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಇವು ಕೃಷ್ಣಾ ಬೇಸಿನ್‌ಗೆ ಬರತಕ್ಕಂಥ ಕೆರೆಗಳು ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ನೀರು ಬಿಡುವುದಕ್ಕೆ ಕಾನೂನು ದೃಷ್ಟಿಯಿಂದ ಸಾದುವಲ್ಲವೆಂದು ಅವರಿಗೂ ಗೊತ್ತಿದೆ. ಮೇಲಾಗಿ ಕಾವೇರಿ ಜಲವಿವಾದ ಇರುವುದು ತಮಗೂ ಗೊತ್ತಿದೆ. ಅಂಥಾದ್ದರಲ್ಲಿ ಆ ನೀರನ್ನು ನೇರ ಕಡೆ ತೆಗೆದುಕೊಂಡು ಹೋಗುತ್ತೇವೆಂದರೆ ಅದು ಬಹುಶಃ ಸಾದುವಲ್ಲ, ಆ ಕಾರಣದಿಂದ ಈ ಕೆರೆಗಳಿಗೆ ನೀರನ್ನು ಒದಗಿಸತಕ್ಕಂಥಾದ್ದು ಕಾನೂನು ದೃಷ್ಟಿಯಿಂದ ಸಾದುವಲ್ಲವೆಂದು ಸ್ಪಷ್ಟವಾಗಿ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ. — ತಮಿಳುನಾಡಿನವರಿಗೆ ನೀರು ಬೇಕಾದರೆ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ನಮಗೆ ನೀರು ಕೊಡುವುದಕ್ಕೆ ತಯಾರಿಲ್ಲವೆಂದರೆ ಹೇಗೆ ?

ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ

೯೩೫. ಶ್ರೀ ಪಿ. ಸಿ. ಸಿದ್ದನಗೌಡರ್ (ಕುಲಘಟ್ಟಗಿ)— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ ಯಾವಾಗ ಪ್ರಾರಂಭವಾಯಿತು ?

(ಆ) ಈ ಬೈಪಾಸ್ ರಸ್ತೆಯ ನಿರ್ಮಾಣ ಕಾರ್ಯಕ್ಕಾಗಿ ಎಷ್ಟು ಹಣ ಮೀಸಲಾಗಿಟ್ಟಿದೆ ?

(ಇ) ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.

(ಈ) ಈ ಕೆಲಸ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು)—

(ಅ) ೩೦ ಕಿ.ಮೀ ಉದ್ದದ ಬೈಪಾಸ್ ರಸ್ತೆ ಕೆಲಸವನ್ನು ಎರಡು ಹಂತಗಳಲ್ಲಿ ಮಾಡಲಾಗುವುದು. ಮೊದಲನೇ ಹಂತದ ಕೆಲಸ ಜುಲೈ ೧೯೮೭ರಲ್ಲಿ ಪ್ರಾರಂಭವಾಗಿದೆ.

(ಆ) ಈ ಬೈಪಾಸ್ ಕೆಲಸಕ್ಕಾಗಿ ೬೫೦ ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ,

(ಇ) ಮೊದಲನೇ ಹಂತಕ್ಕೆ ಈವರೆಗೆ ೨೦೦ ಲಕ್ಷ ರೂ.ಗಳು ಖರ್ಚಾಗಿದೆ.

(ಈ) ಮೊದಲನೇ ಹಂತದ ಸುಮಾರು ೧೭ ಕಿ.ಮೀ. ಕೆಲಸವು ೧೯೯೧ರ ಅಂತ್ಯಕ್ಕೆ ಪೂರ್ಣಗೊಳ್ಳುವುದು.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ ಯಾವಾಗ ಪ್ರಾರಂಭ ಆಯಿತು, ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅಧಿಕಾರಿಗಳು ಕೊಟ್ಟ ಲೆಕ್ಕ ಸರಿಯಿಲ್ಲ ಎಂದು ನಾನು ಹೇಳುತ್ತೇನೆ. ತಾವೂ ಒಪ್ಪಿ ಬಹುದು ಆದರೆ ಎರಡು ಕೋಟಿ ರೂಪಾಯಿ ಹೇಗೆ ಖರ್ಚು ಆಗುತ್ತದೆ ಎಂದು ಸ್ವಲ್ಪಮಟ್ಟಿಗೆ ನಮಗೆ ಅನುಮಾನ ಬರುತ್ತದೆ. ಎರಡು ಕೋಟಿ ರೂಪಾಯಿ ಕರೆಕ್ಟಾಗಿ ಖರ್ಚು ಆಗಿದೆಯೋ ಅಥವಾ ಸ್ವಲ್ಪ ಹೆಚ್ಚುಕಡಿಮೆ ಆಗಿದೆಯೋ ? ಇದರಲ್ಲಿ ಎರಡು ಸ್ಟೇಜ್ ಮಾಡಿದ್ದಾರೆ. ಮೊದಲನೆಯ ಸ್ಟೇಜ್‌ಗೆ ೨ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎರಡನೇ ಸ್ಟೇಜ್ ಮುಗಿಸಬೇಕಾದರೆ ಆರೂವರೆ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಸಂಪೂರ್ಣವಾಗಿ ಈ ಕೆಲಸ ಯಾವಾಗ ಮುಗಿಯುತ್ತದೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಇದು ರಾಷ್ಟ್ರೀಯ ಹೆದ್ದಾರಿ ಯೋಜನೆಯಲ್ಲಿ ತೆಗೆದುಕೊಂಡಿರುವ ತಕ್ಕ ಒಂದು ಕಾರ್ಯಕ್ರಮ. ಇದಕ್ಕೆ ರಾಜ್ಯ ಸರ್ಕಾರದ ಹಣದ ಕೊರತೆ ಏನೂ ಇಲ್ಲ. ೩೦ ಕಿಲೋ ಮೀಟರ್ ಉದ್ದದ ಬೈಪಾಸ್ ರಸ್ತೆಯನ್ನು ಮಾಡತಕ್ಕದ್ದಕ್ಕೆ ಎರಡು ಹಂತಗಳನ್ನು ಮಾಡಿದ್ದಾರೆ. ಮೊದಲನೇ ಹಂತದಲ್ಲಿ ೧೭ ಕಿಲೋ ಮೀಟರ್ ಮತ್ತು ಎರಡನೇ ಹಂತದಲ್ಲಿ ೧೩ ಕಿಲೋ ಮೀಟರ್ ಮಾಡತಕ್ಕದ್ದು. ಮೊದಲನೆಯ ಹಂತದ ೧೭ ಕಿಲೋ ಮೀಟರ್ ಮಾಡತಕ್ಕದ್ದಕ್ಕೆ ಈ ವರ್ಷ ನಮ್ಮ ಆಯವ್ಯಯದಲ್ಲಿ ಎರಡು ನೂರು ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೇವೆ. ಇದು ಹೆಚ್ಚು ಆದರೂ ಕೂಡ ರೀ-ಅಪ್ರೋಪಿಯೇಟ್ ಮಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ೧೭ ಕಿಲೋ ಮೀಟರ್ ಅನ್ನು ಸ್ಟಿಪ್ಪುಲೇಟೆಡ್ ಟೈಮ್‌ನಲ್ಲಿ ಮಾಡತಕ್ಕದ್ದು ಅಂದರೆ ೧೯೯೧ನೇ ಇಸವಿಯಲ್ಲಿ ಪೂರ್ತಿ ಮಾಡಲು ನಾವು ಎಲ್ಲಾ ರೀತಿಯ ಹಣ ಒದಗಿಸತಕ್ಕದ್ದಕ್ಕೆ ಮತ್ತು ಕೆಲಸ ಮಾಡತಕ್ಕದ್ದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುತ್ತೇನೆ. ಮತ್ತು ಎರಡನೇ ಹಂತವನ್ನು ಇದು ಮುಗಿದ ನಂತರ ತೆಗೆದುಕೊಳ್ಳತಕ್ಕ ಕಾರ್ಯಕ್ರಮ ಮಾಡುತ್ತೇವೆ. ಈಗಾಗಲೇ ಎರಡನೇ ಹಂತಕ್ಕೆ ರಾಜ್ಯದ ಹೆದ್ದಾರಿ ಏನು ಇದೆ, ಅದರ ಬಗ್ಗೆ ವಿನ್ಯಾಸ ಮತ್ತು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕೂಡ ಕಳಿಸಿದ್ದೇವೆ. ಅದು ಬಂದ ನಂತರ ಮತ್ತು ಇದು ಮುಗಿದ ನಂತರ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡ.—ಮಾನ್ಯ ಅಧ್ಯಕ್ಷರೇ, ಮೊದಲನೇ ಹಂತದ ಕಾರ್ಯಕ್ರಮದ ಬಗ್ಗೆ ಮಾನ್ಯ ಸಚಿವರು ಸ್ಥಳಕ್ಕೆ ಬೇಟಿ ಕೊಟ್ಟು ನೋಡಬೇಕು. ಎರಡನೆ ಹಂತದ್ದು ತೀವ್ರ ಗತಿಯಲ್ಲಿ ಆಗಬೇಕೆಂದು ಕೇಂದ್ರ ಸರ್ಕಾರದಲ್ಲಿದ್ದರೂ ಕೂಡ ಹುಬ್ಬಳ್ಳಿ-ಧಾರವಾಡ ಬೈಪಾಸ್ ರೋಡ್ ಕೆಲಸ ಬೇಗ ಮುಗಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ನಾನು ಈ ಸ್ಥಳಕ್ಕೆ ಹೋಗಿದ್ದೇನೆ, ಪರಿಶೀಲನೆ, ಮಾಡಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನು ಇದೆ, ಅದರಂತೆ ಆದಷ್ಟು ಬೇಗ ಅದನ್ನು ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಜಪಾನ್ ಯೋಜನೆಯಿಂದ ಹಾಸನ ಜಿಲ್ಲೆಗೆ ಸೌಕರ್ಯ

೧೨೧೯. ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಜಪಾನ್ ಯೋಜನೆಯಲ್ಲಿ ಹಾಸನ ಜಿಲ್ಲೆ ಅಭಿವೃದ್ಧಿಗೆ ನಿಗದಿಪಡಿಸಿರುವ ವೆಚ್ಚ ವೆಷ್ಟು ? ಅಂತು ಯಾವ ಯಾವ ಯೋಜನೆಗೆ ವೆಷ್ಟೆಷ್ಟು ಹಣ ನಿಗದಿಪಡಿಸಲಾಗಿದೆ ?

(ಆ) ಹಾಸನ ತಾಲ್ಲೂಕಿನ ದೊಡ್ಡ ಗದ್ದವಳ್ಳಿ, ಹರಿಹರಪುರ ಮತ್ತು ಕೋರಮಂಗಲ ಗ್ರಾಮಾಂತರ ಪ್ರದೇಶದಲ್ಲಿ ಹೊಯ್ಸಳ ದೇವಸ್ಥಾನಗಳ ಅಭಿವೃದ್ಧಿಗೆ ಈ ಯೋಜನೆಯಿಂದ ಏನಾದರೂ ಸಹಾಯ ದೊರೆಯುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—(ಯೋಜನೆ, ಕಾನೂನು, ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).

(ಅ) ಈ ಬಗ್ಗೆ ಅಂತಿಮ ನಿರ್ಣಯವಾಗಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಶಿವರಾಮು.—ಮಾನ್ಯ ಅಧ್ಯಕ್ಷರೇ, ಉತ್ತರ ಒದಗಿಸಿರುವುದನ್ನು ನೋಡಿದರೆ ನನಗೆ ಇನ್ನೊಂದು ಪ್ರಶ್ನೆ ಕೇಳತಕ್ಕ ಅವಶ್ಯಕತೆ ಇಲ್ಲ ಎಂದು ಕಾಣಿಸುತ್ತದೆ. ಆದರೆ ಜಿಲ್ಲಾ ಮಂತ್ರಿಗಳು ನಮ್ಮ ಹಳೇಬೀಡಿನ ಕಾರ್ಯಕ್ರಮದಲ್ಲಿ ಒಂದು ಸಲ ಭಾಗವಹಿಸಿದ್ದ ಕಾಲದಲ್ಲಿ ಟೂರಿಸಂ ಡೆವಲಪ್‌ಮೆಂಟ್ ಒಗ್ಗೆ ಹಣವನ್ನು ಕೊಡತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಅಷ್ಟರೊಳಗೆ ಜಪಾನ್ ಸ್ಕೀಮ್‌ನಲ್ಲಿ ೧೪೦ ಕೋಟಿ ರೂಪಾಯಿ ಒದಗಿಸಿತ್ತು ಎಂದು ತಿಳಿದುಬಂತು. ಆದರೆ ಯಾವುದೇ ಒಂದು ಸ್ಕೀಮ್‌ನಲ್ಲಿ ಹಣ ಒದಗಿಸಬೇಕಾದರೆ ಒಂದು ಪ್ಲಾನ್ ಅಥವಾ ಪ್ರೊಪೋಸಲ್ ಕೊಡದೆ ಒದಗಿಸುವುದಿಲ್ಲ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಈ ಒಂದು ಪ್ರಶ್ನೆಯನ್ನು ಏತಕ್ಕೆ ಕೇಳುತ್ತಿದ್ದೇನೆ ಅಂದರೆ, ಜಿಲ್ಲಾ ಪರಿಷತ್ತಿಗೆ ಯಾವಾಗ ರೋಡ್ ಅನ್ನು ಇಂಪ್ರೂವ್ ಮಾಡಬೇಕು ಎಂಬ ಬಗ್ಗೆ ಪ್ರೊಪೋಸಲ್ ಕಳಿಸಿ ಎಂದು ಕೇಳಿದ್ದಾರೆ. ಅದೇರೀತಿ ಲೋಕೋಪಯೋಗಿ ಇಲಾಖೆಯವರನ್ನು ಸಹ ಕೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಪ್ಲಾನ್ ಅಂಡ್ ಎಸ್ಟಿಮೇಟ್ ಕೂಡ ಹಾಸನ್‌ನಿಂದ